
# ಬಡವನ ಮಗ ರಾಜನಾದ!



ಅನೇಕಾನೇಕ ವರ್ಷಗಳ ಹಿಂದೆ ಒಂದೂರಿನಲ್ಲಿ ಗಂಗಪ್ಪನೆಂಬ ಒಬ್ಬ ಬಡವನಿದ್ದ. ಅವನಿಗೆ ಮದುವೆಯಾಗಿ ಬಹಳ ವರ್ಷಗಳಾದರೂ ಮಕ್ಕಳೇ ಆಗಲಿಲ್ಲ. ಅವನು ಎಲ್ಲ ದೇವರಿಗೂ ಮಕ್ಕಳಾಗಲೆಂದು ಬೇಡಿ ಹರಕೆ ಕಟ್ಟಿಕೊಂಡ. ಕೊನೆಗೂ ಅವನ ಕೋರಿಕೆ ಫಲಿಸಿ ಒಂದು ಗಂಡುಮಗು ಜನಿಸಿತು. ಗಂಗಪ್ಪನಿಗೆ ತುಂಬ ಸಂತೋಷವಾಯಿತು.

ಗಂಗಪ್ಪ ತನ್ನ ಮಗುವಿಗೆ ಚಂದ್ರಪ್ಪನೆಂದು ಹೆಸರಿಟ್ಟು ಮುದ್ದಿನಿಂದ ಬೆಳೆಸತೊಡಗಿದ. ಚಂದ್ರಪ್ಪನು ಐದು ವರ್ಷದ ಬಾಲಕನಾಗಿರುವಾಗ ಒಂದು ದಿನ ಮನೆಯ ಮುಂದೆ ಆಟವಾಡುತ್ತಿದ್ದ. ಆಗ ಆ ಊರಿನ ಜೋಯಿಸರು ಆ ದಾರಿಯಲ್ಲಿ ಬಂದರು. ಬಾಲಕನಾದ ಚಂದ್ರಪ್ಪನನ್ನು ದೃಷ್ಟಿಸಿ ನೋಡಿ ಗಂಗಪ್ಪನನ್ನು ಕರೆದು ‘ಅಯ್ಯಾ! ನಿನ್ನ ಮಗನ ಮುಖ ಲಕ್ಷಣಗಳನ್ನು ಗಮನಿಸಿ ಹೇಳುತ್ತಿದ್ದೇನೆ. ನಿನ್ನ ಮಗ ಚಂದ್ರಪ್ಪನಿಗೆ ರಾಜನಾಗುವ ಯೋಗವಿದೆ. ಅವನನ್ನು ಚೆನ್ನಾಗಿ ಕಾಪಾಡಿಕೋ. ಇವನಿಗೆ ಪ್ರಾಥಮಿಕ ವಿದ್ಯೆಯನ್ನು ನಾನೇ ಹೇಳಿ ಕೊಡುತ್ತೇನೆ. ಇವನನ್ನು ದಿನಾಲೂ ನನ್ನ ಮನೆಗೆ ಮುಂಜಾನೆ ಕಳಿಸು’ ಎಂದು ಹೇಳಿ ಹೋದರು.

ಜೋಯಿಸರ ಮಾತುಗಳನ್ನು ಕೇಳಿ ಗಂಗಪ್ಪನಿಗೆ ತುಂಬ ಸಂತೋಷವಾಯಿತು. ಮಗನ ಮೇಲೆ ಮುದ್ದು ಮತ್ತಷ್ಟು ಹೆಚ್ಚಾಯಿತು. ಅವನ ಅತಿ ಮುದ್ದಿನಿಂದ ಚಂದ್ರಪ್ಪನು ಮೊಂಡನಾಗಿ ಬೆಳೆಯಲಾರಂಭಿಸಿದ. ಅವನು ಜೋಯಿಸರ ಮನೆಗೆ ಹೋಗಿ ವಿದ್ಯೆಯನ್ನು ಸರಿಯಾಗಿ ಕಲಿಯದೆ ಅರ್ಧಕ್ಕೆ ಬಿಟ್ಟುಬಿಟ್ಟ. ಹುಡುಗರ ಗುಂಪು ಕಟ್ಟಿಕೊಂಡು ತಂಟೆ ಮಾಡಲು ಶುರುಮಾಡಿದ. ಸದಾ ತನ್ನ ಗೆಳೆಯರ ಜೊತೆ ಮನೆಯಿಂದ ಹೊರಗೇ ಇರುತ್ತಿದ್ದ. ಎಷ್ಟೋ ದಿನ ರಾತ್ರಿ ವೇಳೆ ತನ್ನ ಮನೆಗೇ ಬರುತ್ತಿರಲಿಲ್ಲ. ಗಂಗಪ್ಪ ತನ್ನ ಮಗನಿಗೆ ಅನೇಕ ರೀತಿ ಬುದ್ಧಿ ಹೇಳಿದ.

ಅದರಿಂದ ಏನೂ ಪ್ರಯೋಜನ ಆಗಲಿಲ್ಲ. ಬರುಬರುತ್ತಾ ಚಂದ್ರಪ್ಪನು ಪುಂಡನಾದ. ಅವನ ಕಾಟವನ್ನು ತಡೆಯಲಾಗದೆ ನೆರೆಹೊರೆಯವರೆಲ್ಲ ಗಂಗಪ್ಪನಲ್ಲಿ ನಿತ್ಯವೂ ದೂರು ಹೇಳತೊಡಗಿದರು. ಗಂಗಪ್ಪನಿಗೆ ಏನು ಮಾಡಬೇಕೆಂದು ತಿಳಿಯದೆ ತಲೆ ಕೆಟ್ಟುಹೋದಂತೆ ಅನಿಸಿತು.

ಒಂದು ದಿನ ಗಂಗಪ್ಪ ತನ್ನ ಮಗ ಚಂದ್ರಪ್ಪನಿಗೆ ತನ್ನ ಮಾತು ಕೇಳದೆ ಹೋದುದಕ್ಕೆ ತುಂಬ ಸಿಟ್ಟುಗೊಂಡು ಹೊಡೆದೂಬಿಟ್ಟ. ಆಗ ಚಂದ್ರಪ್ಪನು ತನ್ನ ತಂದೆಯ ಮೇಲೆ ಕೋಪಗೊಂಡು ಮನೆಯನ್ನು ಬಿಟ್ಟು ಎತ್ತಲೋ ಹೊರಟುಹೋದ. ಬಹಳ ದಿನಗಳು ಕಳೆದರೂ ಮನೆಗೆ ಹಿಂತಿರುಗಲಿಲ್ಲ.

ಆಗ ಗಂಗಪ್ಪನ ಸಿಟ್ಟು ಜೋಯಿಸರ ಕಡೆ ತಿರುಗಿತು. ತಾನು ತನ್ನ ಮಗ ಚಂದ್ರಪ್ಪನಿಗೆ ಮುದ್ದು ಮಾಡಿ ಹಾಳು ಮಾಡಲು ಜೋಯಿಸರ ಮಾತೇ ಕಾರಣವೆಂದು ಗಂಗಪ್ಪನಿಗೆ ಅನ್ನಿಸಿ, ಅವನು ಜೋಯಿಸರ ಮನೆಗೆ ಬಂದು ಕೂಗಾಡಿದ. ‘ಜೋಯಿಸರೇ! ನೀವು ನನ್ನ ಮಗನಿಗೆ ರಾಜ ಯೋಗವಿದೆ ಎಂದು ಸುಳ್ಳು ಹೇಳಿದಿರಿ. ನಾನು ‘ಬಡವನ ಮಗ ರಾಜನಾಗಲು ಸಾಧ್ಯವೇ?’ ಎಂದು ಯೋಚಿಸದೆ ನಿಮ್ಮ ಮಾತುಗಳನ್ನು ತುಂಬಾ ನಂಬಿಕೊಂಡೆ. ನನ್ನ ಮಗನನ್ನು ಬಹಳ ಮುದ್ದುಮಾಡಿ ಬೆಳೆಸಿದೆ. ಈಗ ನನ್ನ ಮಗನು ಮನೆ ಬಿಟ್ಟು ಹೋಗಿದ್ದಾನೆ. ಇದಕ್ಕೆಲ್ಲ ನೀವೇ ಕಾರಣ. ನಾನು ಸುಮ್ಮನಿರದೆ ಊರಿನ ಕೊತ್ವಾಲರಿಗೆ ದೂರು ನೀಡಿ ನಿಮ್ಮನ್ನು ಸೆರೆಮನೆಗೆ ಕಳಿಸುತ್ತೇನೆ’ ಎಂದು ಬೆದರಿಕೆ ಹಾಕಿದ.

ಗಂಗಪ್ಪನು ಕೂಗಾಡಿ ಗಲಾಟೆ ಮಾಡುತ್ತಿದ್ದಾಗ ಜೋಯಿಸರು ಸುಮ್ಮನೆ ಕುಳಿತಿದ್ದರು. ನಂತರ ‘ಅಯ್ಯಾ! ನಿನ್ನ ಮಗ ಚಂದ್ರಪ್ಪನಿಗೆ ಇರುವ ರಾಜಯೋಗವೇ ಹೀಗೆಲ್ಲ ಮಾಡಿಸುತ್ತಿದೆ. ಅಲ್ಲಯ್ಯ! ಅವನು ನಿನ್ನಂತೆ ಕೂಲಿ ಮಾಡುತ್ತ ಕೂತರೆ ಅವನಿಗೆ ರಾಜಯೋಗ ಒದಗಿ ಬರುವುದಾದರೂ ಹೇಗೆ? ಅದಕ್ಕೆ ಅವನು ಮನೆಬಿಟ್ಟು ದೂರ ಹೋಗಿದ್ದಾನೆ. ಅವನ ಲೋಕ ಸಂಚಾರವು ಅವನಿಗೆ ಲೋಕಾನುಭವವನ್ನು ಕೊಟ್ಟು ರಾಜ ಪದವಿಗೆ ಬೇಕಾದ ಅರ್ಹತೆಯನ್ನು ನೀಡುತ್ತದೆ. ಅವನ ರಾಜಯೋಗದ ದಿನಗಳು ಇದೀಗ ಪ್ರಾರಂಭವಾದ ಹಾಗೆ ತೋರುತ್ತಿದೆ. ಹೇಗೂ ನನ್ನಿಂದ ಅಲ್ಪ ಸ್ವಲ್ಪ ಪ್ರಾಥಮಿಕ